ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟಿನ ಹಿನ್ನೀರಿನಿಂದ ಬಾಧಿತವಾಗಿರುವ ಗ್ರಾಮಗಳಲ್ಲಿ ನೀರು ಶೇಖರಣೆಯಿಂದಾಗಿ ರೈತರ ಜಮೀನಿನ ಪೈರು (ಬೆಳೆ)ಗಳಿಗೆ ಮನೆ ಮತ್ತು ಜಾನುವಾರುಗಳಿಗೆ ತೊಂದರೆಯಾಗುತ್ತಿರುವುದು ನಿಜವಲ್ಲವೇ:

ಆ) ಹಾಗಿದ್ದಲ್ಲಿ ಈ ಹಿನ್ನೀರಿನಿಂದ ಈ ಮುಂಗಾರು ಬೆಳೆಗಳಿಗೆ ಮತ್ತು ಜಾನುವಾರುಗಳಿಗೆ ತೊಂದರೆಯಾದರೆ ಪರಿಹಾರ ನೀಡುವಲ್ಲಿ ಸರ್ಕಾರದ ನಿಲುವೇನು;

ಇ) ಈ ಬಗ್ಗೆ ಸಮೀಕ್ಷೆ ನಡೆಸಿ ಪರಿಹಾರ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ:

ಶ್ರೀ ಮಲ್ಲಿಕಾರ್ಜುನ ಖರ್ಗೆ, ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು.

ಅ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟುಗಳ ಮುಳುಗಡೆಯಲ್ಲಿ ಬರುವ ಭೂಮಿಯನ್ನು ಜಲಾಶಯದ ಗರಿಷ್ಟ ಮಟ್ಟದವರೆಗೆ (ಎಫ್. ಆರ್. ಎಲ್) ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಈಗಾಗಲೇ ಪರಿಹಾರ ಧನವನ್ನು ಸಹ ನೀಡಲಾಗಿರುತ್ತದೆ. ಆದಾಗ್ಯೂ, ಜಲಾಶಯಗಳ ಹಿನ್ನೀರಿನಿಂದ ಕೆಲವು ಗ್ರಾಮಗಳು ಬಾಧಿತವಾಗಿರುವ ಬಗ್ಗೆ ದೂರು ವರದಿಗಳು ಬಂದಿದ್ದು, ಅಗತ್ಯ ಸರ್ವೇಕ್ಷಣಾ ಕಾರ್ಯ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ವೇಕ್ಷಣಾ ವರದಿಯಾನುಸಾರ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು.

ಆ) ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಮತ್ತು ನಾರಾಯಣಪುರ ಆಣೆಕಟ್ಟುಗಳ ಮುಳುಗಡೆಯಲ್ಲಿ ಬರುವ ಭೂಮಿಯನ್ನು ಜಲಾಶಯದ ಗರಿಷ್ಟ ಮಟ್ಟದವರೆಗೆ (ಎಫ್. ಆರ್. ಎಲ್) ಸ್ವಾಧೀನ ಪಡಿಸಿಕೊಳ್ಳಲಾಗಿದ್ದು, ಈಗಾಗಲೇ ಪರಿಹಾರ ಧನವನ್ನು ಸಹ ನೀಡಲಾಗಿರುತ್ತದೆ. ಆದಾಗ್ಯೂ, ಜಲಾಶಯಗಳ ಹಿನ್ನೀರಿನಿಂದ ಕೆಲವು ಗ್ರಾಮಗಳು ಬಾಧಿತವಾಗಿರುವ ಬಗ್ಗೆ ದೂರು ವರದಿಗಳು ಬಂದಿದ್ದು, ಅಗತ್ಯ ಸರ್ವೇಕ್ಷಣಾ ಕಾರ್ಯ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಲಾಗಿದೆ. ಸರ್ವೇಕ್ಷಣಾ ವರದಿಯಾನುಸಾರ ಮುಂದಿನ ಅಗತ್ಯ ಕ್ರಮ ಜರುಗಿಸಲಾಗುವುದು.

5709. (6598) ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ) : ಮಾನ್ಯ ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು, ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಐ.ಡಿ.ಎಸ್.ಎಂ.ಟಿ. ಯೋಜನೆಯನ್ನು ರಾಜ್ಯದಲ್ಲಿ ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ; ಅಂದಿನಿಂದ ಇಂದಿನವರೆಗೂ ಯೋಜನೆಗೆ ಒಳಪಟ್ಟ ಸ್ಥಳಗಳಾವುವು: (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಈ ಯೋಜನೆಗೆ ಒಳಪಡಲು ನಗರ ಸ್ಥಳೀಯ ಸಂಸ್ಥೆಗಳು ಪಾಲಿಸಬೇಕಾದ ಅಗತ್ಯ ಕ್ರಮಗಳಾವುವು: (ಕೇಂದ್ರ ಸರ್ಕಾರದ ಮಾರ್ಗದರ್ಶಕ ಸೂತ್ರಗಳ ಪಟ್ಟಿ ಇದ್ದರೆ ಒದಗಿಸುವುದು);

ಇ) ಬಾಗಲಕೋಟೆ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಯಾವ ಯಾವ ನಗರ ಸ್ಥಳೀಯ ಸಂಸ್ಥೆಗಳು ಇಂದಿಗೂ ಈ ಯೋಜನೆ ಅಡಿಯಲ್ಲಿ ಒಳಪಡಿಸಲಾಗಿಲ್ಲ ಕಾರಣಗಳೇನು;

ಈ) ಈ ಯೋಜನೆಗೆ ಒಳಪಡಿಸುವಾಗ ಈ ಮೂರು ಜಿಲ್ಲೆಗಳ ನಗರ ಸ್ಥಳೀಯ ಸಂಸ್ಥೆಗಳ ಬಗ್ಗೆ ತಾರತಮ್ಯ ತೋರಲಾಗುತ್ತಿರುವುದು ನಿಜವಲ್ಲವೇ; ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು;

ಶ್ರೀ ಎಸ್. ಆರ್. ಮೋರೆ, ಪೌರಾಡಳಿತ ಹಾಗೂ ಕೆ.ಯು.ಐ.ಡಿ.ಎಫ್.ಸಿ. ಸಚಿವರು.

ಅ) ಐ.ಡಿ.ಎಸ್.ಎಂ.ಟಿ. ಯೋಜನೆಯನ್ನು ರಾಜ್ಯದಲ್ಲಿ 1982–83 ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. ಇದುವರೆವಿಗೂ ಒಟ್ಟು 177 ಪಟ್ಟಣಗಳನ್ನು ಆಯ್ಕೆ ಮಾಡಲಾಗಿದೆ. (ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ).

ಆ) 5 ಲಕ್ಷದೊಳಗಿನ ಜನಸಂಖ್ಯೆಯಿರುವ ಪಟ್ಟಣಗಳನ್ನು ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಆಯ್ಕೆ ಮಾಡಲಾಗುತ್ತಿದ್ದು, ಸದರಿ ಪಟ್ಟಣಗಳನ್ನು ಆಯ್ಕೆ ಮಾಡುವಾಗ ಕರ್ನಾಟಕ ಅರ್ಬನ್ ಸ್ಕಾಟಜಿ ಪೇಪರ್‌ನಲ್ಲಿ ಅಳವಡಿಸಿರುವ ಪಟ್ಟಣಗಳಿಗೆ ಮೊದಲ ಆದ್ಯತೆ ನೀಡಲಾಗುವುದು. ಕೇಂದ್ರ ಸರ್ಕಾರದ

ಮಾರ್ಗಸೂಚಿಯನ್ವಯ ಪಟ್ಟಣಗಳ ಜನಸಂಖ್ಯೆಯಾನುಸಾರ ಪಟ್ಟಣಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ.

	ವರ್ಗ
20000 ಕ್ಕಿಂತ ಕಡಿಮೆ ಜನಸಂಖ್ಯೆಯುಳ್ಳ ಪಟ್ಟಣಗಳು	A
20,000 – 50,000	B
50,000 – 100,000	C
100,000 – 300,00	D
300,000 – 500,000	E

ಐ.ಡಿ.ಎಸ್.ಎಂ.ಟಿ. ಯೋಜನೆಯನ್ನು ಅಳವಡಿಸಲು ಪಟ್ಟಣಗಳಿಂದ ಸ್ವೀಕೃತವಾಗಿರುವ ಪ್ರಸ್ತಾವನೆಗಳನ್ನು ರಾಜ್ಯ ಮಟ್ಟದ ಮಂಜೂರಾತಿ ಸಮಿತಿ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆದು ಸದರಿ ಯೋಜನೆಯಡಿ ಪಟ್ಟಣಗಳನ್ನು ಆಯ್ಕೆ ಮಾಡಲಾಗುವುದು.

ಇ) 1. ಬಾಗಲಕೋಟೆ ಜಿಲ್ಲೆಯಲ್ಲಿ ಗುಳೇದಗುಡ್ಡ,
2. ರಾಯಚೂರು ಜಿಲ್ಲೆಯಲ್ಲಿ ಮುದುಗಲ್, ದೇವದುರ್ಗ
3. ಕೊಪ್ಪಳ ಜಿಲ್ಲೆಯಲ್ಲಿನ ಕುಷ್ಟಗಿ, ಯಲ್ಬುರ್ಗಾ ಪಟ್ಟಣಗಳು

ಬಾಕಿ ಇರುವ ಪಟ್ಟಣಗಳಿಂದ ಪ್ರಸ್ತಾವನೆ ಸ್ವೀಕೃತವಾದ ನಂತರ ಈ ಪಟ್ಟಣಗಳನ್ನು ಆಯ್ಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಈ) ಬಾಗಲಕೋಟೆ ಜಿಲ್ಲೆಯಲ್ಲಿನ 12 ಪಟ್ಟಣಗಳಲ್ಲಿ 11 ಪಟ್ಟಣಗಳನ್ನು ರಾಯಚೂರು ಜಿಲ್ಲೆಯಲ್ಲಿನ 6 ಪಟ್ಟಣಗಳಲ್ಲಿ 4 ಪಟ್ಟಣಗಳನ್ನು ಕೊಪ್ಪಳ ಜಿಲ್ಲೆಯಲ್ಲಿನ 4 ಪಟ್ಟಣಗಳಲ್ಲಿ 2 ಪಟ್ಟಣಗಳನ್ನು ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಆಯ್ಕೆ ಮಾಡಿದ್ದು, ಈ ಮೂರು ಜಿಲ್ಲೆಗಳಿಗೆ ತಾರತಮ್ಯ ತೋರಿರುವುದಿಲ್ಲ.

ಅನುಬಂಧ

ಐ.ಡಿ.ಎಸ್.ಎಂ.ಟಿ ಯೋಜನೆಯಡಿ ಆಯ್ಕೆಗೊಂಡಿರುವ ಪಟ್ಟಣಗಳ ವಿವರ

1.	ಬೆಂಗಳೂರು ಗ್ರಾಮಾಂತರ		
	ನಗರ ಸಭೆ	:	ಚನ್ನಪಟ್ಟಣ, ರಾಜನಗರ, ದೊಡ್ಡಬಳ್ಳಾಪುರ,
	ಪುರಸಭೆ	:	ಮಾಗಡಿ, ಹೊಸಕೋಟೆ, ದೇವನಹಳ್ಳಿ, ಆನೇಕಲ್, ಕನಕಪುರ, ವಿಜಯಪುರ.
	ಪಟ್ಟಣ ಪಂಚಾಯಿತಿ	:	ನೆಲಮಂಗಲ
2.	ದಾವಣಗೆರೆ		
	ನಗರ ಸಭೆ	:	ಹರಿಹರ, ದಾವಣಗೆರೆ,
	ಪುರಸಭೆ	:	ಚನ್ನಗಿರಿ,
	ಪಟ್ಟಣ ಪಂಚಾಯಿತಿ	:	ಹರಪ್ಪನಹಳ್ಳಿ, ಹೊನ್ನಾಳಿ
3.	ತುಮಕೂರು	:	

	ನಗರಸಭೆ	:	ತುಮಕೂರು,
	ಪುರಸಭೆ	:	ಶಿರಾ, ಕುಣಿಗಲ್, ತಿಪಟೂರು, ಚಿಕ್ಕನಾಯಕನಹಳ್ಳಿ, ಮಧುಗಿರಿ,
	ಪಟ್ಟಣಪಂಚಾಯಿತಿ	:	ಗುಬ್ಬಿ, ತುರುವೇಕೆರೆ,
4.	ಕೋಲಾರ		
	ನಗರ ಸಭೆ	:	ಕೋಲಾರ, ಚಿಂತಾಮಣಿ, ಚಿಕ್ಕಬಳ್ಳಾಪುರ, ಕೆ.ಜಿ.ಎಫ್,
ಪುರಸಭೆ	:	ಗೌರಿಬಿದನೂರು, ಮುಳಬಾಗಿಲು, ಮಾಲೂರು, ಶಿಡ್ಲಘಟ್ಟ, ಬಂಗಾರಪೇಟೆ	
	ಪಟ್ಟಣ ಪಂಚಾಯಿತಿ	:	ಬಾಗೇಪಲ್ಲಿ, ಶ್ರೀನಿವಾಸಪುರ
5.	ಶಿವಮೊಗ್ಗ		
	ನಗರ ಸಭೆ	:	ಶಿವಮೊಗ್ಗ, ಭದ್ರಾವತಿ
	ಪುರಸಭೆ	:	ಸಾಗರ, ತೀರ್ಥಹಳ್ಳಿ, ಶಿಕಾರಿಪುರ
	ಪಟ್ಟಣ ಪಂಚಾಯಿತಿ		ಜೋಗ್‌ಕಾರ್ಗಲ್, ಸೊರಬ, ಹೊಸನಗರ
6.	ಚಿತ್ರದುರ್ಗ		
	ನಗರ ಸಭೆ	:	ಚಿತ್ರದುರ್ಗ
	ಪುರಸಭೆ	:	ಚಳ್ಳಕೆರೆ, ಹಿರಿಯೂರು
	ಪಟ್ಟಣ ಪಂಚಾಯಿತಿ	:	ಹೊಸದುರ್ಗ, ಮೊಳಕಾಲ್ಮೂರು, ಹೊಳಲಕೆರೆ
7.	ಮೈಸೂರು		
	ಪುರಸಭೆ	:	ಕೆ.ಆರ್. ನಗರ, ಹುಣಸೂರು, ನಂಜನಗೂಡು
	ಪಟ್ಟಣ ಪಂಚಾಯಿತಿ	:	ಬನ್ನೂರು
8.	ಹಾಸನ		
	ನಗರ ಸಭೆ	:	ಹಾಸನ,
	ಪುರಸಭೆ	:	ಅರಸೀಕೆರೆ, ಹೊಳೆನರಸೀಪುರ, ಚನ್ನರಾಯಪಟ್ಟಣ
	ಪಟ್ಟಣ ಪಂಚಾಯಿತಿ	:	ಅರಕಲಗೂಡು, ಬೇಲೂರು
9.	ಚಿಕ್ಕಮಗಳೂರು		
	ನಗರ ಸಭೆ	:	ಚಿಕ್ಕಮಗಳೂರು,
	ಪುರಸಭೆ	:	ಕಡೂರು, ಬೀರೂರು, ತರೀಕೆರೆ
	ಪಟ್ಟಣ ಪಂಚಾಯಿತಿ	:	ಶೃಂಗೇರಿ, ಕೊಪ್ಪ, ನರಸಿಂಹರಾಜಪುರ, ಮೂಡಿಗೆರೆ
10.	ಚಾಮರಾಜನಗರ		
	ನಗರ ಸಭೆ	:	ಚಾಮರಾಜನಗರ,
	ಪುರಸಭೆ	:	ಕೊಳ್ಳೇಗಾಲ, ಗುಂಡ್ಲುಪೇಟೆ,
11.	ಮಂಡ್ಯ		
	ನಗರ ಸಭೆ	:	ಮಂಡ್ಯ

	ಮರಸಭೆ	:	ಮಳವಳ್ಳಿ, ಶ್ರೀರಂಗಪಟ್ಟಣ,
	ಪಟ್ಟಣ ಪಂಚಾಯಿತಿ	:	ಕೆ.ಆರ್. ಪುರ, ನಾಗಮಂಗಲ
12.	ದಕ್ಷಿಣ ಕನ್ನಡ		
	ಮರಸಭೆ	:	ಮೂಡಬಿದ್ರಿ, ಪುತ್ತೂರು
	ಪಟ್ಟಣ ಪಂಚಾಯಿತಿ	:	ಬಂಟ್ವಾಳ, ಸುಳ್ಯ, ಮುಲ್ಕಿ
13.	ಕೊಡಗು		
	ನಗರಸಭೆ	:	ಮಡಿಕೇರಿ
	ಪಟ್ಟಣ ಪಂಚಾಯಿತಿ	:	ಕುಶಾಲನಗರ
14.	ಉಡುಪಿ		
	ನಗರ ಸಭೆ	:	ಉಡುಪಿ
	ಪಟ್ಟಣ ಪಂಚಾಯಿತಿ	:	ಕಾರ್ಕಳ, ಕುಂದಾಪುರ
15.	ಬೆಳಗಾವಿ		
	ನಗರ ಸಭೆ	:	ಬೈಲಹೊಂಗಲ, ಮೂಡಲಗಿ, ಅಥಣಿ, ರಾಮದುರ್ಗ, ಸಂಕೇಶ್ವರ, ಸವದತ್ತಿ, ಚಿಕ್ಕೋಡಿ, ಬ್ಯಾಡಗಿ
	ಪಟ್ಟಣ ಪಂಚಾಯಿತಿ	:	ಕೋಣ್ಣೂರು, ಖಾನಾಪುರ, ಕುಡಚಿ, ಹುಕ್ಕೇರಿ, ಸದಲಗ, ರಾಯಭಾಗ
16.	ಬಾಗಲಕೋಟೆ		
	ನಗರ ಸಭೆ	:	ಬಾಗಲಕೋಟೆ, ರಬಕವಿ, ಬನಹಟ್ಟಿ,
	ಪುರಸಭೆ	:	ಬಾದಾಮಿ, ಇಳಕಲ್, ಮುಧೋಳ, ಜಮಖಂಡಿ, ಮಹಲಿಂಗಪುರ
	ಪಟ್ಟಣ ಪಂಚಾಯಿತಿ		ಕಿರೂರು, ಹುನಗುಂದ, ತೇರದಾಳ್, ಬೀಳಗಿ
17.	ಧಾರವಾಡ		
	ಪುರಸಭೆ	:	ಅಣ್ಣಿಗೇರಿ,
	ಪಟ್ಟಣ ಪಂಚಾಯಿತಿ	:	ನವಲಗುಂದ, ಅಳ್ನಾವರ, ಕುಂದಗೋಳ್, ಕಲಘಟಗಿ
18.	ಹಾವೇರಿ		
	ನಗರಸಭೆ	:	ರಾಣಿಬೆನ್ನೂರು, ಹಾವೇರಿ
	ಪುರಸಭೆ	:	ಸವಣೂರು, ಹಾನಗಲ್
	ಪಟ್ಟಣ ಪಂಚಾಯಿತಿ	:	ಶಿಗ್ಗಾವ್, ಬಂಕಾಪುರ
19.	ಬಿಜಾಪುರ		
	ನಗರಸಭೆ	:	ಬಿಜಾಪುರ
	ಪುರಸಭೆ	:	ಇಂಡಿ, ಮುದ್ದೇಬಿಹಾಳ್, ಸಿಂದಗಿ, ತಾಳೀಕೋಟೆ
	ಪಟ್ಟಣ ಪಂಚಾಯಿತಿ	:	ಬಸವನಬಾಗೇವಾಡಿ
20.	ಉತ್ತರಕನ್ನಡ		
	ನಗರಸಭೆ	:	ಶಿರಸಿ, ದಾಂಡೇಲಿ, ಕಾರವಾರ
	ಪುರಸಭೆ	:	ಕುಮಟ

	ಪಟ್ಟಣ ಪಂಚಾಯಿತಿ	:	ಹಳಿಯಾಳ, ಹೊನ್ನಾವರ, ಯಲ್ಲಾಪುರ, ಮುಂಡಗೋಡ, ಅಂಕೋಲಾ, ಸಿದ್ದಾಪುರ
21.	ಗದಗ		
	ನಗರಸಭೆ	:	ಗದಗ, ಬೆಟಗೇರಿ,
	ಪುರಸಭೆ	:	ಲಕ್ಷ್ಮೇಶ್ವರ, ಗಜೇಂದ್ರ ಘಡ.
	ಪಟ್ಟಣ ಪಂಚಾಯಿತಿ	:	ರೋಣ, ಮುಂಡರಗಿ, ಮುಳಗುಂದ, ಶಿರಹಟ್ಟಿ, ನರಗುಂದ
22.	ಗುಲ್ಬರ್ಗಾ	:	
	ನಗರ ಪಾಲಿಕೆ	:	ಗುಲ್ಬರ್ಗಾ
	ಪುರಸಭೆ	:	ಶಹಾಪುರ, ಶೋರಾಪುರ, ಚಿಂಚೋಳಿ, ಅಳಂದ, ಯಾದಗಿರಿ, ಚಿತ್ತಾಪುರ, ಶಹಾಪುರ, ಸೇಡಂ
	ಪಟ್ಟಣ ಪಂಚಾಯಿತಿ	:	ಜೇವರ್ಗಿ, ಗುರುಮಿಟಕಲ್.
23.	ರಾಯಚೂರು		
	ನಗರ ಸಭೆ	:	ರಾಯಚೂರು,
	ಪುರಸಭೆ	:	ಮಾನ್ವಿ, ಸಿಂಧನೂರು, ಲಿಂಗಸುಗೂರು
24.	ಬೀದರ್		
	ನಗರಸಭೆ	:	ಬೀದರ್,
	ಪುರಸಭೆ	:	ಭಾಲ್ಕಿ, ಚಿಟಗುಪ್ಪ, ಹುಮ್ನಾಬಾದ್, ಬಸವಕಲ್ಯಾಣ, ಹೊಸಪೇಟೆ,
	ಪಟ್ಟಣ ಪಂಚಾಯಿತಿ	:	ಕೊಟ್ಟೂರು,
25.	ಬಳ್ಳಾರಿ		
	ನಗರಸಭೆ	:	ಬಳ್ಳಾರಿ, ಹೊಸಪೇಟೆ,
	ಪುರಸಭೆ	:	ಸಿರಗುಪ್ಪ
	ಪಟ್ಟಣ ಪಂಚಾಯಿತಿ	:	ಕಮಲಾಪುರ, ತೆಕ್ಕಲಕೋಟೆ, ಹೂವಿನಹಡಗಲಿ, ಸಂಡೂರು,
26.	ಕೊಪ್ಪಳ		
	ನಗರ ಸಭೆ	:	ಕೊಪ್ಪಳ, ಗಂಗಾವತಿ.

5710, (6605) ಶ್ರೀ ದೊಡ್ಡನಗೌಡ ಹನುಮನಗೌಡ ಪಾಟೀಲ್ (ಕುಷ್ಟಗಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಆರಕ್ಷಕ ಉಪ ನಿರೀಕ್ಷಕರ ಹುದ್ದೆಗಳಿಗೆ 1990ರಿಂದ ಇಲ್ಲಿಯವರೆಗೆ ನೇರವಾಗಿ ಯಾವ ಯಾವ ವರ್ಷಗಳಲ್ಲಿ ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಂಡು ನೇಮಕಾತಿ ಆದೇಶ ನೀಡಲಾಗಿದೆ.

ಆ) ನೇಮಕಾತಿಗೊಂಡಿರುವ ಅಭ್ಯರ್ಥಿಗಳಲ್ಲಿ ಹಿಂದಿನ-ಬಿ, ಇಂದಿನ-2ಎ ಗುಂಪಿನಲ್ಲಿ ಆಯ್ಕೆಯಾಗಿರುವ ಅಭ್ಯರ್ಥಿಯ ಹೆಸರು, ವಿದ್ಯಾರ್ಹತೆ, ಜಾತಿ ಮತ್ತು ಜಿಲ್ಲಾವಾರು ವಿವರ ನೀಡುವುದು.

ಇ) 1990 ರಿಂದ 2005ರ ವರೆಗಿನ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ಮತ್ತು ಸದಸ್ಯರಾಗಿ ಕಾರ್ಯ ನಿರ್ವಹಿಸಿದವರ ಹೆಸರು, ಹುದ್ದೆಯ ಸ್ಥಾನ ಮತ್ತು ಜಾತಿವಾರು ವಿವರ